ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **05.07.2024**

ಮುಂದುವರಿದ ಪಾಟೀ ಸವಾಲುಃ ಶ್ರೀ ಡಿ ಕೆ ಟಿ ವಕೀಲರಿಂದ

ದಾವಾ ಸ್ವತ್ತಿನಲ್ಲಿರುವ ಮನೆ ಹಾಗೂ ಅದರ ಆಚೆ ಇರುವ ಮನೆಯ ಎರಡು ಜಾಗಗಳನ್ನು ಚಿನ್ನಪ್ಪನವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಮನೆ ಆರ್ ಸಿ ಸಿ ಮತ್ತು ಶೀಟ್‌ನ ಹೊದಿಕೆ ಇರುವ ಮನೆ ಎಂದರೆ ಸರಿ. ದಾವಾ ಸ್ವತ್ತಿನ ಆಚೆ ಇರುವ ಮನೆ ಆರ್ ಸಿ ಸಿ ಮನೆಯಾಗಿರುತ್ತದೆ. ಎರಡೂ ಮನೆಗಳು ತಲಾ 25 ರಿಂದ 30 ಲಕ್ಷ ಬೆಲೆ ಬಾಳುತ್ತದೆ . ಒಟ್ಟು 60 ಲಕ್ಷ ಬೆಲೆ ಬಾಳುತ್ತದೆ . ದಾವಾ ಸ್ವತ್ತು ಏಕರೆಗೆ ರೂ 1,65,000/- ಮೌಲ್ಯ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಅಂದಾಜು ಮೌಲ್ಯ ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿರುವ ಸ್ವತ್ತನ್ನು ಚಿನ್ನಪ್ಪನವರು ನನ್ನ ತಾಯಿ ಬದುಕಿರುವಾಗಲೇ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ನಾನು ವಿವಾಹದ ನಂತರ ದಾವಾ ಸ್ವತ್ತಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಜೀವಂತವಾಗಿರುವಾಗ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎಲ್ಲಾ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಾಯಿ ದಿ 09-08-2002 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ತಾಯಿ ಆರೋಗ್ಯವಾಗಿರುವಾಗ ಸುಬ್ಬಮ್ಮ ಎಂದು ಸಹಿ ಮಾಡುತ್ತಿದ್ದು ಅವರು ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಸಹಿ ಮಾಡುತ್ತಿರಲಿಲ್ಲ. ನನ್ನ ತಾಯಿ 2001 ರಿಂದ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುತ್ತಾರೆ . ಆ ಸಮಯದಲ್ಲಿ ಅವರನ್ನು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಕರೆದುಕೊಂಡು ಹೋಗಿರುವುದಿಲ್ಲ. ನನ್ನ ತಾಯಿ ಸಾಯುವವರೆಗೂ ಆರೋಗ್ಯದಿಂದ ಇದ್ದರು ನಾನು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ಮರಣ ಶಾಸನವನ್ನು ತೋರಿಸಿ ಅದರಲ್ಲಿರುವ ಸಹಿ ತನ್ನ ತಾಯಿದೆ ಎಂದು ತೋರಿಸಲಾಗಿ ಸಾಕ್ಷಿ ಅದನ್ನು ನಿರಾಕರಿಸಿರುತ್ತಾರೆ . ನನ್ನ ತಾಯಿಯ ಸಹಿ

ನಾನು ನೋಡಿರುತ್ತೇನೆ . ಅವರ ಸಹಿ ಇರುವ ದಾಖಲೆಗಳು ನನ್ನ ಬಳಿ ಇಲ್ಲ. ನನ್ನ ತಾಯಿ ಸಹಿ ನನಗೆ ತಿಳಿಯದೆ ಇದ್ದರು ಮರಣ ಶಾಸನ ಎಂದು ತಿಳಿದ ಕಾರಣ ಅವರ ಸಹಿಯನ್ನು ನಿರಾಕರಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ಹುದುಗೂರು ನಮ್ಮ ಪಕ್ಕದ ಗ್ರಾಮವಾಗಿದ್ದು ಅಲ್ಲಿನ ನಿವಾಸಿ ಮಲ್ಲಪ್ಪನವರ ಮಗ ಜವರೇಗೌಡ ಯಾರು ಎಂದು ನನಗೆ ಗೊತ್ತಿಲ್ಲ. ಜವರೇಗೌಡ ಯಾರು ಎಂದು ನನಗೆ ತಿಳಿದಿದ್ದರು ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿಯ ಮರಣದ ನಂತರ ಖಾತೆ ವರ್ಗಾವಣೆಗೆ ನನ್ನ ಹೆಸರನ್ನು ಸೇರಿಸುವಂತೆ ಅರ್ಜಿಯನ್ನು ನೀಡುವ ಮೊದಲೇ ಪ್ರತಿವಾದಿ 3 ಮತ್ತು 4 ರವರ ಹೆಸರಿಗೆ ಖಾತೆ ವರ್ಗಾವಣೆ ಆಗಿತ್ತು ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಸ್ವತ್ತು ಪ್ರತಿವಾದಿ 3 ಮತ್ತು 4 ರವರ ಹೆಸರಿನಲ್ಲಿರುತ್ತದೆ . ನನ್ನ ತಾಯಿ ದಿ 03-07-2002 ರಂದು ಪ್ರತಿವಾದಿ 1 ಮತ್ತು 3 ರಿಂದ 6 ರವರಿಗೆ ದಾವಾ ಸ್ವತ್ತನ್ನು ವಿಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆ ಸಲ್ಲಿಸುವಾಗ ನಮ್ಮ ವಕೀಲರ ಬಳಿ ಪ್ರತಿವಾದಿ 2 , 7 ಮತ್ತು 8 ರವರು ಸಹ ಬಂದಿರುತ್ತಾರೆ. ಸದರಿಯವರು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿರುವ ವಿಚಾರಗಳನ್ನು ನಾನು ಹೇಳಿದಂತೆ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಸದರಿಯವರು ಸ್ವ ಇಚ್ಛೆಯಿಂದ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಆಸಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಮತ್ತೊಂದು ಹೆಸರು ಚಂದ್ರಮ್ಮ ಎಂದರೆ ಸರಿ .

1 ನೇ ಪ್ರತಿವಾದಿಯ ತಂದೆಯ ಹೆಸರು ಸೊರಗಪ್ಪ ಮತ್ತು ಕೊರಗಪ್ಪ ಎಂದು ನನಗೆ ತಿಳಿದಿದೆ . ನನ್ನ ಮೂಲ ಹೆಸರು ಲಕ್ಷ್ಮಮ್ಮ ಎಂದರೆ ಸರಿ . ನನಗೂ ಮತ್ತು ನನ್ನ ತಂದೆ ಹಾಗೂ 1 ನೇ ಪ್ರತಿವಾದಿಯ ತಂದೆಯವರಿಗೆ ಎರಡು ಹೆಸರುಗಳು ಇದ್ದವು

ಎಂದು ತಿಳಿದಿದ್ದರು ಮರೆ ಮಾಚಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಮರಣದ ನಂತರ ಮರಣ ಶಾಸನದಲ್ಲಿರುವ ವ್ಯಕ್ತಿಗಳಿಗೆ ಹೊರತು ಪಡಿಸಿ ನನಗೂ ಹಾಗೂ ಪ್ರತಿವಾದಿ 2 , 7 ಮತ್ತು 8 ರವರಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಯಾರಿಗೆ ಹಕ್ಕು ಇದೆ ಎಂದು ತಿಳಿದಿದ್ದರು ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಮತ್ತು ಮನೆಗಳ ಮೌಲ್ಯ ನನಗೆ ತಿಳಿದಿದ್ದು ಈ ನ್ಯಾಯಾಲಯಕ್ಕೆ ವ್ಯಾಪ್ತಿ ಇಲ್ಲ ಎಂದು ತಿಳಿದಿದ್ದರೂ ಪ್ರಸ್ತುತ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರ ದ ನ್ಯಾ ದಂ, ಕುಶಾಲನಗರ